**ಮೂರನೆ ಅಪರ ದಿವಾಣಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ. ನ್ಯಾಯಾಲಯ ಕನಕಪುರ**

**ಸಿ.ಸಿ.ನಂಃ 1443/2023**

ಪಿರ್ಯಾದಿ : ಶ್ರೀಮತಿ ರುಕ್ಮಿಣಮ್ಮ

– ವಿರುದ್ಧ –

ಆರೋಪಿ : ಶ್ರೀ ಕೃಷ್ಣ. ಹೆಚ್.ಎಂ

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರ ಅಡಿಯಲ್ಲಿ ಆರೋಪಿತರ ಹೇಳಿಕೆ**

ಪ್ರಶ್ನೆ–1: ಈ ಪ್ರಕರಣದಲ್ಲಿಯ ಸಾಕ್ಷಿ ಹೇಳಿರುವ ಸಾಕ್ಷ್ಯವನ್ನು ನೀವು ತಿಳಿದುಕೊಂಡಿದ್ದೀರಾ?

ಉತ್ತರ :

ಪ್ರಶ್ನೆ–2: ಫ್ರಾಸಾ–1 ಶ್ರೀಮತಿ ರುಕ್ಮಿಣಮ್ಮ ತಮ್ಮ ಸಾಕ್ಷ್ಯದಲ್ಲಿ ನುಡಿಯವುದೇನೆಂದರೆ, ಆರೋಪಿಯಾದ ನೀವು ಫ್ರಾಸಾ–1 ರವರಿಗೆ ಪರಿಚಯವಿದ್ದು ಆರೋಪಿಯಾದ ನೀವು ಫ್ರಾಸಾ–1 ರವರ ಪತಿಯೊಂದಿಗೆ ದಿನಾಂಕ 02.07.2019 ರಂದು ಲೀಸ್ ಡೀಡ್ ಒಪ್ಪಂದ ಮಾಡಿಕೊಂಡಿದ್ದು ಮತ್ತು ಬೋಗ್ಯದ ಹಣ ಎಂದು ನೀಡಿದ 6,80,000/– ರೂಗಳನ್ನು 5,00,000/– ರೂಗಳನ್ನು ನಗದು ಮೂಕಾಂತರ ನೀಡಿ ಉಳಿದ 1,80,000/– ರೂಗಳ ಪೈಕಿ 50,000/– ಪೇಂಟಿಂಗ್ ಮತ್ತು ಇತರೆ ಖರ್ಚು ಎಂದು ಮುರಿದುಕೊಂಡು 1,30,000/– ರೂಪಾಯಿಗಳಳಿಗೆ ದಿನಾಂಕಃ 15.08.2022 ರಂದು ಕರ್ನಾಟಕ ಬ್ಯಾಂಕ್, ಕನಕಪುರ ಶಾಖೆಯ ಚೆಕ್ ನಂ. 296802 ನೇದ್ದನ್ನು ರೂ.1,30,000/–ಗಳಿಗೆ ಫ್ರಾಸಾ.1 ರವರಿಗೆ ನೀಡಿರುತ್ತೀರಿ ಎಂದು ಸಾಕ್ಷ್ಯ ನುಡಿಯುತ್ತಾರೆ, ಇದಕ್ಕೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ–3: ಫ್ರಾಸಾ–1 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ನಿಪಿ.1 ಚೆಕ್ಕನ್ನು ಫಿರ್ಯಾದಿಯು ತನ್ನ ಖಾತೆ ಹೊಂದಿರುವ ಸ್ಟೇಟ್ ಬ್ಯಾಂನಕ್ ಇಂಡಿಯಾ, ಕನಕಪುರ ಶಾಖೆ ಇವರಿಗೆ ನಗದೀಕರಣಕ್ಕಾಗಿ ಸಲ್ಲಿಸಿದ್ದು, ಸದರಿ ಚೆಕ್ಕು ದಿನಾಂಕಃ 08.09.2022 ರಂದು ನಗದೀಕರಣವಾಗದೇ ( **Kindly contact Drawer– Drawee Bank and please present again**) ಎಂಬ ಹಿಂಬರಹದೊಂದಿಗೆ ಅಮಾನ್ಯಗೊಂಡಿದ್ದು, ಈ ಬಗ್ಗೆ ನಿಮಗೆ ವಕೀಲರ ಮುಖಾಂತರ ದಿನಾಂಕಃ 21.09.2022

ರಂದು ನೋಟಿಸನ್ನು ಕಳಿಸಿದ್ದು, ಸದರಿ ನೋಟಿಸ್ ನ್ನು ನೀವು ತೆಗೆದುಕೊಳ್ಳದೆ ಹಾಗೂ ಹಣವನ್ನು ವಾಪಸ್ಸು ಮಾಡದೇ, ಪಿರ್ಯಾದಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ಚೆಕ್ಕನ್ನು ನೀಡಿರುತ್ತೀರಿ ಎಂದು ಸಾಕ್ಷ್ಯನುಡಿಯುತ್ತಾರೆ ನೀವೇನು ಹೇಳುತ್ತೀರಿ?

ಉತ್ತರಃ

ಪ್ರಶ್ನೆ–4: ನಿಮಗೆ ಏನಾದರೂ ಹೇಳುವುದು ಇದೆಯಾ?

ಉತ್ತರ :

ಪ್ರಶ್ನೆ–5: ನಿಮ್ಮ ಪರವಾಗಿ ಸಾಕ್ಷಿ ಮಾಡಿಸಲು ಇಚ್ಛಿಸುತ್ತೀರಾ?

ಉತ್ತರ :

(ಮೇಲೆ ಹೇಳಿದ ಹೇಳಿಕೆಗಳನ್ನು ಆರೋಪಿಗೆ ಗೊತ್ತಿರುವ ಭಾಷೆಯಲ್ಲಿ ಅವರಿಗೆ ಓದಿ ಹೇಳಲಾಯಿತು ಮತ್ತು ಆರೋಪಿ ಹೇಳಿದ ಉತ್ತರಗಳನ್ನು ಯಥಾವತ್ತಾಗಿ ತೆರೆದ ನ್ಯಾಯಾಲಯದಲ್ಲಿ ಬರೆದುಕೊಳ್ಳಲಾಯಿತು).

Sd/-

(ರವಿಪ್ರಕಾಶ್ ಟಿ .ಆವಿನ್)
ಮೂರನೇ ಅಪರ ದಿವಾಣಿ ನ್ಯಾಯಾಧೀಶರು
ಮತ್ತು ಪ್ರ. ದ. ನ್ಯಾ. ದಂ. ಕನಕಪುರ.

ಸ್ಥಳಃ ಕನಕಪುರ
ದಿನಾಂಕಃ 22.11.2025

ಆರೋಪಿ ಸಹಿ: